ಕೆಲ್ಸಕ್ಕೆ ಹ್ವಾಗ ಬ್ಯಾಡ, ನಿನ್ನ ಊಟ ತಿಂಡಿಯ ಖರ್ಚು ನೋಡ್ಕೋತೇನೆ ಎಂದವ್ನೆ. ಒಡವ್ರಿಗೆ ಇಷ್ಟೇಯ ದಕ್ಕೋದು ಎಂದುಕೊಂಡು ಪಂಕಜ ಸುಮ್ಮಾಗಿದ್ಲು. ಏನಾದ್ರಾಗ್ಲಿ ನಾ ಕಟ್ಕಂಡಿದ್ದ ಕನಸುಗಳ್ನ ಬಿಡೋ ಹಂಗಿಲ್ಲ ಎಂದುಕೊಂಡಿದ್ಲು. ಕೃಷ್ಣಪ್ಪ ಕಟ್ತಿದ್ದ ಮನೆ ಮುಗಿಯೋ ಹಂತಕ್ಕೆ ಬಂದಿತ್ತು. ಏನಾರ ಅವ್ನು ನನ್ನ ಕೈ ಬುಟ್ಟು ಹೊಂಟೋದ್ರೆ ನಾ ಏನ ಮಾಡ್ಲಿ ಎಂದು ಕೊಳ್ತಿದ್ಲು ಪಂಕಜ. ಅವ್ನು ಗುಡ್ಲಿಗೆ ಬಂದಾಗ ಕೇಳಿದ್ಲು,

'ಅಲ್ಲ ನೀನು ನನ್ನ ಬ್ಯಾಡ ಬ್ಯಾಡ ಅಂದ್ರು ಕೇಳ್ಸಿಕೊಳ್ದೇನೆ, ಕೆಡ್ಸಿ ಬುಟ್ಟೆ. ಚೆಂದಾಗಿದ್ದೋಳ್ನ ಹಾಳ್ ಮಾಡಿ ನನ್ನ ಮೊಖಕ್ಕೆ ಮಸಿ ಬಳ್ದೆ. ನೀ ಏನಾರ ಮನೆ ಕಟ್ಟಿ ಮುಗಿಸಿದ ಮ್ಯಾಕೆ ನಂಗೆ ಕೈಕೊಟ್ಟು ಹ್ವಾದ್ರೆ ನಾನಾರ ಏನು ಮಾಡ್ಲಿ. ಇನ್ನು ಶಾಲೆಗೂ ಹೋಗೋ ಹಂಗಿಲ್ಲ ಅನ್ನಿಸ್ತದೆ. ಮುಟ್ಟಾಗ್ದೆ ಮೂರು ತಿಂಗಳಾಗದೆ. ನೀನೇರ ಹೇಳ್ದೆ ಕೇಳ್ದೆ ಹೋದ್ರೆ ನಾ ಕೆರೆನೋ ಬಾವಿನೋ ನೋಡ್ಕ ಬ್ಯಾಕು' ಎಂದಿದ್ದಳು.

'ಹಂಗೆ ಮಾಡ್ತಾರೇನಮ್ಮಿ, ನಿನ್ನೂ ನೋಡ್ಕಳ್ಳೋದೆಯ ಅವ್ನುನ್ನೂ ನೋಡ್ಕಳ್ಳೋದೆಯ. ಹಂಗೆಲ್ಲಾ ಕೈಕೊಟ್ಟು ಹೋಗೋನಲ್ಲ ನಾನು, ಏನನ್ಕೊಂಡಿದ್ದೀಯ ನನ್ನ, ಹಂಗೆ ಮಾಡೋದಾಗಿದ್ರೆ ನಾನು ಗುಡ್ಲಿಗೆ ಆಗಾಗ ಯಾಕ್ ಬರ್ತಿದ್ದೆ ಹೇಳು, ನಿಂಗೆ ಕೈತುಂಬ ಹಣ ಯಾಕ್ ಕೊಡ್ತಿದ್ದೆ. ನಿನ್ನ ಓದೋಕೆ ಯಾಕ್ ಕಳಿಸ್ತಿದ್ದೆ ಹ್ಯಾಳು' ಎಂದ ಅವನ ಮಾತು ಕೇಳಿ, ಅದೂ ಸರಿಯೆ ಎಂದುಕೊಂಡಿದ್ದಳು. ಆದರೆ ಅವ್ನು ಹೇಳಿದಂಗೆ ನಡ್ಕಳ್ಳದೆ ಹ್ವಾದ. ಮನೆ ಕಟ್ಟಿ ಮುಗಿತಿದ್ದ ಹಂಗೆ ಪಂಕಜಳಿಗೆ ಹೇಳ್ದೆ ಕೇಳ್ದೇನೇ ಹೆಂಡತಿ ಮಕ್ಳನ್ನ ಕರ್ಕೊಂಡು ನಡ್ದೇ ಬುಟ್ಟ. ಪಂಕಜ ಕಟ್ಕೊಂಡಿದ್ದ ಕನಸುಗಳೆಲ್ಲ ಗೋರಿಯಾಗಿ ಹ್ವಾದ್ವು, ಎಲ್ಲಿಂತ ಹುಡುಕ್ತಾಳೆ ಅವ್ನ. ಮತ್ತೆಲ್ಲಿ ಮನೆ ಕಟ್ಟಲು ಸಿಕ್ಕದೆಯೋ ಹೊಂಟು ಹೋಗವ್ನೆ ನಂಗೆ ಕೈ ಕೊಟ್ಟು ಎಂದು ಕೈ ಕೈ ಹೊಸಕಿಕೊಳ್ಳುತ್ತ ಅಳುತ್ತಾ ಕುಳಿತಿದ್ದಳು ಒಂದೆರಡು ದಿನ.

ಶಾಲೆಗೆ ಹೆಂಗ್ ಹೋದಾಳು. ಹೊಟ್ಟೆಗ ಆರು ತಿಂಗಳಾಗದೆ. ಇನ್ನು ಮೂರು ತಿಂಗ್ಳಲ್ಲಿ ಹೆರಿಗೆ ಆಯ್ತದೆ. ಹೊಟ್ಟೆಲ್ಲಿ ಬೆಳೀತಿರೋ ಮಗಿನ ಸಾಯ್ಸ ಬಾರ್ದು. ಬುದ್ಧಿ ಇದ್ದೋರು ಮಾಡೋ ಕೆಲ್ಸನ ಅವೆಲ್ಲ ಎಂದುಕೊಂಡು ಮನೆಗೆಲಸಕ್ಕೆ ಹೋಗಿ ಬಂದು ಮಾಡ್ತಿದ್ಲು. ಸಂಬ್ಳ ಬರ್ತಿತ್ತು. ಒಬ್ಳಿಗೆ ಸಾಕಾಗೋ ಅಷ್ಟು ಸಿಗೋದು. ತಾನೆ ಸರ್ಕಾರಿ ಆಸ್ಪತ್ರೆ ಗಂಟ ಹೋಗಿ ತೋರ್ಸಿಕೊಂಡು ಬರೋಳು. ಡಾಕ್ಟ್ರಮ್ಮ ನಾಲ್ಕು ದಿನ ಬುಟ್ಟು ಆಸ್ಪತ್ರೆಗೆ ಸೇರ್ಕೊ ಅಂದಿದ್ರು. ಆಯ್ತು ಸೇರ್ಕೊಂಡ ಮ್ಯಾಕೆ ಯಾರು ನೋಡ್ಕೋಳೊರು ನನ್ನ ಎಂದು ಗೋಳಾಡುತ್ತಲೆ ಗುಡ್ಲಿಗೆ ಬಂದ್ಲು ಪಂಕಜ. ಅವಳು ಬರೋ ಹೊತ್ಗೆ ಗುಡ್ಲ ಬಾಗಿಲಿಗೆ ಬಂದು ನಿಂತವ್ನೆ ಕೃಷ್ಣಪ್ಪ, ಅವ್ನನನ್ನ ಕಂಡವ್ಳೆ ಪಂಕಜ ಬಿಕ್ಕಿ ಬಿಕ್ಕಿ ಅತ್ಕೊಂಡ್ಲು,

'ಮೊದ್ಲು ಗುಡ್ಲು ಬಾಗ್ಲು ತೆಗಿ ಹೇಳೋವಂತೆ, ನೀನು ಕೇಳೋವಂತಿ' ಎಂದ ಕೃಷ್ಣಪ್ಪ.





ಅವ್ಳು ಬಾಗಿಲು ತೆಗೆದು ಒಳಕ್ಕೆ ಕರ್ಕೊಂಡ್ಲು, ಕಿಟಿಕಿ ಬಾಗ್ಲಾಗೆ ಒರಕ್ಕೊಂಡು ನಿಂತ ಕೃಷ್ಣಪ್ಪನಿಗೆ ಕಾಫಿ ಕಾಸಿ ತಂದ್ಕೊಟ್ಲು, ಬ್ಯಾಡ ಅಂದ್ರು ಕೇಳ್ಲಿಲ್ಲ.

'ತಿಂಗಳು ತುಂಬದೆ, ಏನ್ ಮಾಡ್ಕೋತಿಯೋ ಅಂತ ಬಿರ್ನೆ ಬಂದೆ, ಮಧ್ಯೆ ಬರಾಕಾಗ್ಲಿಲ್ಲ. ಅಕ್ಸಿಡೆಂಟ್ ಆಗಿ ಕಾಲು ಮುರ್ಕೊಂಡು ಮೂರು ತಿಂಗಳು ಕೆಲ್ಸಕ್ಕೆ ಹೋಗ್ದೆ ಮನೇಲಿದ್ದೆ' ಎಂದು ಮಂಡಿಯವಗೆ ಆದ ಗಾಯವನ್ನು ಪಂಚೆ ಸರಿಸಿ ತೋರಿಸಿದ.

'ಯಪ್ಪೋ ಎಂಥ ಗಾಯ, ಇನ್ನೂ ಹಸಿಯಾಗಯ್ತೆ.'

'ಹೂ...ಕಾಣಮ್ಮಿ ಸಕ್ಕರೆ ಕಾಹಿಲೆ ಐತಲ್ಲ' ಎಂದ. ಪಂಕಜಳಿಗೆ ಅವ್ನ ಕಥೆ ಕೇಳಿ ಅಯ್ಯೋ ಅನಿಸ್ತು

'ಯಾಕ್ ಬರಾಕೋದೆ ಹೆಂಗೋ ಆಯ್ತಿತ್ತು'

'ಹಂಗ್ ಮಾಡಾಕಾಯ್ತದ, ನಿನ್ನ ಹೊಟ್ಟೇಲಿ ಬೆಳಿತಿರೋದು ನನ್ನ ಮಗೀನೆ ಅಲ್ವ, ಆಸ್ಪತ್ರೆಗೆ ಸೇರ್ಕೊ ಮಿಕ್ಕಿದ್ನೆಲ್ಲಾ ನಾನು ನೋಡ್ಕೋತೇನೆ' ಎಂದು ಕೈಗೆ ಸಾವಿರ ರೂಪಾಯಿ ಕೊಟ್ಟು ಹ್ವಾದ. ಅವನ ಮಾತು ಕಥೆ ಎಲ್ಲಾ ಕೇಳಿದ್ಮಾಕೆ ಪಂಕಜಳ ಕನಸು ಮತ್ತೆ ಚಿಗುರೊಡೆಯ ತೊಡಗಿತು. ಮಗಿ ಒಂದು ಆಗ್ಲಿ, ಕೆಲಸ ಮಾಡೋರ ಮನೆಯವರ ಕೂಟ ಬುಟ್ಟು ಮತ್ತೆ ಶಾಲೆಗೆ ಸೇರ್ಕತೇನೆ, ಮಿಕ್ಕಿದ್ದೆಲ್ಲಾ ಆಮ್ಯಾಕೆ ನೋಡವ ಎಂದುಕೊಂಡಳು. ಮಗು ಆದ ಮ್ಯಾಲೆ ಯಾರ ಕೂಟನಾದ್ರು ಹೇಳಿ ಕಳ್ಸು ಎಂದು ಕೃಷ್ಣಪ್ಪ ತಾನಿರುವ ಜಾಗದ ವಿಳಾಸವನ್ನು ಬರ್ಕೊಟ್ಟು ಹೋಗಿದ್ದ. ಪಂಕಜಳಿಗೆ ಮಗು ಆಯ್ತು, ಹೆಣ್ಣು ಮಗ ಹಡದಿದ್ಲು. ಸರ್ಕಾರಿ ಆಸ್ಪತ್ರೆಯಾಗ ಚೆಂದಾಗಿ ನೋಡ್ಕೊಂಡ್ರು ಅವ್ಳನ್ನ. ಮಗ ಹುಟ್ಟಿದ್ಕೂಡ್ಲೆ ಅವ್ಳು ಕೆಲ್ಸ ಮಾಡ್ತಿದ್ದ ದೊಡ್ಡ ಮನೆಯೋರು ಬಂದು ನೋಡ್ಕಂಡು ಹೋಗವ್ರೆ. ಅವ್ರ ಮನೆಯಾಗ ತೋಟ ನೋಡ್ಕಳ್ಳೋ ಮಾಲಿ ಇದ್ದ. ಅವ್ನ ಕೂಟ ಪಂಕಜ ಕೊಟ್ಟ ಚೀಟಿಯನ್ನು ಕೊಟ್ಟು ಕೃಷ್ಣಪ್ಪನಿಗೆ ಹೇಳಿ ಬರುವಂತೆ ಹೇಳಿ ಕಳಸವ್ರೆ. ಮಾಲಿ ಹ್ವಾಗಿ ಬಂದವ್ನೆ. ಅಲ್ನೋಡಿದ್ರೆ ಮೆರವಣಿಗೆ ನಡೀತಿದೆ, ಕೃಷ್ಣಪ್ಪ ಸತ್ತೋಗವ್ನೆ. ವಾಪಸ್ಸು ಬಂದ ಮಾಲಿ ಯಾವ ಬಾಯಲ್ಲಿ ಹೇಳಿಯಾನು? ಸುಮ್ಮೆ ಕೈ ಕಟ್ಟಿಕೊಂಡು ಬಿಕ್ತಿದ್ದ ಮಾಲಿನ ತಾನೇ ಮಲಗಿದ್ದೋಳು ಎದ್ದು ಕುಂತು ಕೇಳಿದ್ಲು ಪಂಕಜ.

ಮಾಲಿ ಬಿಕ್ಕುತ್ತಲೇ ಅಂದ,

'ಯಾವ ಬಾಯ್ನಲ್ಲಿ ಹೇಳ್ಲಿ ಕಾಣವ್ವ, ನಿನ್ ಯಜಮಾನ್ರು ಸತ್ತೋಗವ್ರೆ; ಶವ ಮೆರವಣಿಗೆ ನಡೆಯೋದನ್ನ ನೋಡ್ ಬಂದಿವ್ನಿ' ಎಂದು ಹೇಳುತ್ತಾ ಮಾಲಿ ಕಣ್ಣೊರಸಿಕೊಂಡ. ಪಕ್ಕದಲ್ಲಿ ಪರಪಂಚ ಜ್ಞಾನವಿಲ್ದೆ ಮಲಗಿರೋ ಮಗೀನ ಕಡಿಕೆ ನೋಡಿದ್ಲು ಪಂಕಜ. ಅಳಲಿಲ್ಲ. ಮಗುವಿನ ಭವಿಷ್ಯದ ಬಗ್ಗೆ ಕನಸುಗಳ್ನ ಕಟ್ಟಿಕೊಂಡ್ಲು. ಅವ್ನು ಸತ್ತೋದ ಅಂತ ಅವ್ನ ಹಿಂದೆ ಹೋಗಾಕತದ, ನನ್ನಿನ್ನೂ ಕನಸುಗಳದೆ ಅವಿನ್ನೂ ಸತ್ತಿಲ್ಲ. ರಟ್ಟೆಯೊಳಗೆ ಕಸವು ಐತೆ, ಯಾರ ನೆರವೂ ನಂಗೆ ಬೇಕಿಲ್ಲ. ಮಗ್ಳ ಭವಿಷ್ಯವನ್ನ ರೂಪಿಸ್ತೇನೆ ಅಂದ್ಕೊಂಡು ಎದ್ದು ಕುಂತು ಕೊಂಡ್ಲು. ಗುಡ್ಲ ಪಕ್ಕದಾಗೆ ಕೆರೆಯೊಂದಿತ್ತು, ಅದರ ತುಂಬಾ ಕಮಲದ ಹೂಗಳಿದ್ದುವು. ನಿನ್ನೆ ಪಂಕಜ ಕಂಡಾಗ ಮೊಗ್ಗಾಗಿದ್ದ ಹೂಗಳು ಇಂದು ಆಗಲೇ ಅರಳಿ ನಿಂತಿವೆ, ಹೂಗಳನ್ನೇ ನೋಡುತ್ತ ಮಗುವಿನ ಕಡಿಕೆ ಮೊಖ ತಿರುಗಿಸಿದಳು. ಮಗು ಕೈ ಬೆರಳನ್ನು ಚೀಪುತ್ತಾ ನಗುತ್ತಿತ್ತು. ಎತ್ತಿ ಎದೆಗಪ್ಪಿ ಕೊಳ್ಳುತ್ತಾ ಮತ್ತೆ ಹೇಳ್ಕಂಡ್ಲು, 'ಮಗ ನಿಂಗಾಗಿ ಬದುಕಿವ್ನಿ, ನಿನ್ನೂ ಬದುಕಿಸೋದೆಯಾ' ಎಂದು ಪಿಸುಗುಟ್ಟಿದ್ಲು. ■